ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-5 Issue 6, May-June, 2024, Pp. 74-83
©*IIMRD*, Mysuru
IIMRD JOURNALS
www.iimrd.com

# ಚಾಮರಾಜನಗರ ಜಿಲ್ಲೆಯ ತತ್ವಪದಕಾರರು

**ಮಹಾದೇವಸ್ವಾಮಿ ಎಂ.**
ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಹಾಗೂ ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತವಿಶ್ವವಿದ್ಯಾಲಯ, ಮುಕ್ತ ಗಂಗೋತ್ರಿ, ಮೈಸೂರು

**ಸಾರಾಂಶ: (Abstract)**

*ಕರ್ನಾಟಕ ರಾಜ್ಯದ ಗಡಿಭಾಗದ ಜಿಲ್ಲೆಯಾದ ಚಾಮರಾಜನಗರ ಹಲವು ಧರ್ಮ ಮತ್ತು ಸಂಸ್ಕೃತಿಗಳ ಆಶ್ರಯತಾಣವಾಗಿದೆ. ಜಾನಪದ, ಕಲೆ, ಸಾಹಿತ್ಯ, ಸಂಸ್ಕೃತಿಗಳು ಇಲ್ಲಿ ಚಲನಶೀಲವಾಗಿದೆ. ಜಿಲ್ಲೆಯು ಚಾಮರಾಜನಗರ, ಕೊಳ್ಳೇಗಾಲ, ಗುಂಡ್ಲುಪೇಟೆ, ಯಳಂದೂರು ಮತ್ತು ಹನೂರು ಎಂಬ 5 ತಾಲ್ಲೂಕುಗಳನ್ನು ಒಳಗೊಂಡಿದೆ. ಚಾಮರಾಜನಗರ ಜಿಲ್ಲೆಯು ಜನಪದ ಕಣಜವೆಂದೇ ಹೆಸರಾಗಿದ್ದು ಇದಕ್ಕೆ ಕೇಂದ್ರ ಶಕ್ತಿಗಳಾಗಿ ಸಾಂಸ್ಕೃತಿಕ ನಾಯಕರಾದ ಮಂಟೇಸ್ವಾಮಿ, ಮಾದೇಶ್ವರ, ಬಿಳಿಗಿರಿರಂಗಸ್ವಾಮಿ ಕಾರಣರಾಗಿದ್ದಾರೆ. ಹಾಗಾಗಿಯೇ ಜಿಲ್ಲೆಯು ಸಾಂಸ್ಕೃತಿಕವಾಗಿ ಸಾಹಿತ್ಯಿಕವಾಗಿ ಶ್ರೀಮಂತಗೊಂಡಿದೆ. ಸಾಹಿತ್ಯ ಕ್ಷೇತ್ರಕ್ಕೆ ಚಾಮರಾಜನಗರ ಜಿಲ್ಲೆಯ ಕೊಡುಗೆ ಅನನ್ಯವಾಗಿದೆ. ದೇಪರಾಜನ 'ಸೊಬಗಿನ ಸೋನೆ'ಯಿಂದ ಹಲವಾರು ಶ್ರೇಷ್ಠ ಕವಿ–ಕವಯತ್ರಿಯರು, ಸಾಹಿತಿಗಳು ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಸಾಧನೆಗೈದಿದ್ದಾರೆ. ಅಂತೆಯೇ ಜಿಲ್ಲೆಯ ಬೇರೆ ಬೇರೆ ಪ್ರದೇಶಗಳಲ್ಲಿ 15ನೇ ಶತಮಾನದಿಂದ 19ನೇ ಶತಮಾನದ ನಡುವೆ ಹಲವಾರು ತತ್ವಪದಕಾರರು ಅನೇಕ ಅತ್ಯಮೂಲ್ಯ ತತ್ವಪದಗಳನ್ನು ರಚಿಸಿದ್ದಾರೆ. ಸ್ವತಃ ಹಾಡಿದ್ದಾರೆ. ಆ ಮೂಲಕ ಸಂಸ್ಕೃತಿಯೊಂದರ ಆಚರಣೆಗೆ ಕಾರಣರಾಗಿದ್ದಾರೆ.*

**ಮುಖ್ಯಪದಗಳು (Keywords):** ಚಾಮರಾಜನಗರ, ಗಡಿ ಜಿಲ್ಲೆ, ಜಾನಪದ, ಮೌಖಿಕ ಪರಂಪರೆ, ತತ್ವಪದ.

**ಪೀಠಿಕೆ**

ಕನ್ನಡ ಸಾಹಿತ್ಯದಲ್ಲಿ, ತತ್ವಪದಗಳು ತಮ್ಮದೇಯಾದ ವೈಶಿಷ್ಟ್ಯತೆಯನ್ನು ಹೊಂದಿದೆ. ಇವು ಸ್ವರವಚನ, ಕೈವಲ್ಯಪದ, ಭಜನೆಪದ ಅನುಭಾವಪದ ಎಂಬ ಬೇರೆ ಬೇರೆ ಹೆಸರುಗಳಿಂದಲೂ ಗುರುತಿಸಿಕೊಂಡಿವೆ. ಇವು ವರ್ಗಪರಂಪರೆಯನ್ನು ಪ್ರಶ್ನಿಸುತ್ತಾ, ತನ್ನೊಳಗಿರುವ ಅಪ್ಪಟದೇಸಿ ಚಿಂತನಾಕ್ರಮದಿಂದ ವೈದಿಕ ಪರಂಪರೆಯ ನಂಬಿಕೆ ಪುರಾಣ ಪರಿಕರಗಳನ್ನು ತಿರಸ್ಕರಿಸಿವೆ. ಶಿಷ್ಟ ಸಾಹಿತ್ಯದಂತೆ ಕೇವಲ ಸಮಾಜದ ಮೇಲ್ವರ್ಗಗಳಿಗೆ ಮಾತ್ರವೇ ಸೀಮಿತವಾಗದೇ, ಭಾರತೀಯ ಸಂಸ್ಕೃತಿಯ ಅತ್ಯಂತ ವಿಶಿಷ್ಟ ಅಭಿವ್ಯಕ್ತಿ ರೂಪವಾದ ಮೌಖಿಕ ಮಾಧ್ಯಮದ ಮೂಲಕ ಪರಿಣಾಮಕಾರಿಯಾಗಿ ರೂಪಿತಗೊಂಡಿವೆ. ಅಲ್ಲದೆ ಜನಸಾಮಾನ್ಯರಿಗೆ ಬದುಕಿನ

*Please cite this article as:* *ಮಹಾದೇವಸ್ವಾಮಿ ಎಂ.* (2024). ಚಾಮರಾಜನಗರ ಜಿಲ್ಲೆಯ ತತ್ವಪದಕಾರರು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(6). ಪು.ಸಂ.* 74–83

ತಿಳಿವಳಿಕೆಯ ಜೊತೆಗೆ ನೈತಿಕ ಮಾರ್ಗದರ್ಶನ ನೀಡುತ್ತಾ, ಸಾಂಸ್ಕೃತಿಕ ಜಡತ್ವದ ವಿರುದ್ಧ ತನ್ನ ಪ್ರತಿಭಟನೆಯನ್ನು ದಾಖಲಿಸಿದೆ. ಜನತೆಯ ನಡುವೆ ಸಾಮರಸ್ಯವನ್ನು ಮೂಡಿಸುತ್ತಾ ಹಾಗೂ ಸಹಬಾಳ್ವೆಯಿಂದ ಬದುಕಲು ಪ್ರೇರೇಪಿಸುತ್ತಾ ಜನರ ನಡುವೆ ಉಳಿದಿವೆ. ಇಂತಹ ತತ್ವಪದಗಳು ಚಾಮರಾಜನಗರ ಜಿಲ್ಲೆಯಾದ್ಯಂತ ಕಾಣಸಿಗುತ್ತಿದ್ದು, ವಿಶಿಷ್ಟ ಪ್ರಕಾರವಾಗಿ ಬೆಳೆದು ಬಂದಿವೆ. ಹಾಗೆಯೇ ಸಮಾಜಪರ ಧೋರಣೆಯನ್ನು ಪ್ರಖರವಾದ ವೈಚಾರಿಕತೆಯನ್ನು ಒಳಗೊಂಡಿವೆ.

ಕವಿರಾಜಮಾರ್ಗಕಾರನಿಗಿಂತಲೂ ಹಿಂದಿನಿಂದ ಬೆಳೆದು ಬಂದಿರಬಹುದಾದ ಹಾಡುಗಬ್ಬ ವಿಷಯಾಂತರಗೊಂಡು ಹನ್ನೆರಡನೆಯ ಶತಮಾನದಲ್ಲಿ ಬಸವಾದಿ ಪ್ರಮಥರಿಂದ ತತ್ವಪದವಾಗಿ ಆಧ್ಯಾತ್ಮಿಕ ಮನೋಭಾವವನ್ನು ಮೈಗೂಡಿಸಿಕೊಂಡಿತು. ತಾಳ, ರಾಗ ಸಮನ್ವಿತವಾಗಿ ಸ್ವರವಚನ, ಸ್ವರಪದ, ಕೈವರ್‍ಯಪದ ಮುಂತಾದ ಹೊಸ ಸಾಹಿತ್ಯಿಕ ಪರಿಭಾಷೆಯಲ್ಲಿ ಹೊಸ ಸಾಹಿತ್ಯ ಸೃಷ್ಠಿಯಾಯಿತು. ಇದು ತತ್ವಪದ ಸಾಹಿತ್ಯದ ಸೃಷ್ಟಿಯ ಮೊದಲ ಹಂತವೆನಿಸಿತು. ಅನಂತರ 15ನೇ ಶತಮಾನದಿಂದ 19ನೇ ಶತಮಾನದವರೆಗೆ ಚಾಮರಾಜನಗರ ಜಿಲ್ಲೆ ಸೇರಿದಂತೆ ಕರ್ನಾಟಕದಾದ್ಯಂತ 'ತತ್ವಪದ' ಹೆಸರಿನ ಅಪಾರ ಸಾಹಿತ್ಯ ಸೃಷ್ಟಿಯಾಯಿತು. ಈ ಕಾಲಘಟ್ಟದಲ್ಲಿಯೇ ಕರ್ನಾಟಕದ ಎಲ್ಲಾ ಭಾಗಗಳಂತೆ ಚಾಮರಾಜನಗರ ಸೀಮೆಯಲ್ಲಿಯೂ ಅನುಭಾವಿಗಳು ಕಾಣಿಸಿಕೊಂಡರು. ಜಗತ್ತನ್ನು ಬಿಡುಗಣ್ಣಿನಿಂದ ಗಮನಿಸಿದ ಅವರು ತಮ್ಮ ಜೀವನಾನುಭವವನ್ನು ಧಾರ್ಮಿಕ ಚೌಕಟ್ಟಿನೊಳಗೆ ಹಿಡಿದಿಟ್ಟು ಅವುಗಳಿಗೆ ರಾಗಸ್ಪರ್ಷ ನೀಡಿ ಜನರಿಗೆ ನೈತಿಕತೆಯ ಪರಾಗವನ್ನು ಉಣಿಸುವ ಪ್ರಯತ್ನ ಮಾಡಿದರು. ಬದುಕಿನಲ್ಲಿ ಅವರು ಕಂಡುಂಡ ನೋವು–ನಲಿವು, ಸುಖ–ದುಃಖಗಳ ಅನುಭವಗಳು ಹಾಡುಗಳಾಗಿ ಹೊರಚಿಮ್ಮಿದವು.

ವೈಚಾರಿಕವಾಗಿ ಆಧ್ಯಾತ್ಮಿಕತೆಯಲ್ಲಿ ಮಿಂದ ತತ್ವಪದಕಾರರು ಮೂಢನಂಬಿಕೆ, ಕಂದಾಚಾರ, ಆಷಾಢಭೂತಿತನವನ್ನು ಖಂಡಿಸಿದರು. ಧರ್ಮಕ್ಕೆ ಅನುಗುಣವಾದ ರೀತಿಯಲ್ಲಿ ಜನತೆಗೆ ಸಾಮಾಜಿಕ ಸಮಾನತೆ ಮತ್ತು ವೈಚಾರಿಕತೆಯ ಪ್ರಜ್ಞೆಯನ್ನು ಬಿತ್ತುವ ಕಾಯಕವನ್ನು ಕೈಗೊಂಡರು. ಹೀಗಾಗಿಯೇ ಇವರು ಜನಪದರ ಮನೆ–ಮನಗಳಿಗೆ ಸಮೀಪವಾಗಿರುವುದನ್ನು ನಾವು ಗುರುತಿಸಬಹುದು.

ತತ್ವಪದಕಾರರ ಇನ್ನೊಂದು ವಿಶೇಷತೆ ಎಂದರೆ ಅವರು ಜನತೆಗೆ ತಮ್ಮ ಚಿಂತನೆಗಳನ್ನು ತಲುಪಿಸಲು ಸೂಕ್ತವಾದ ಸಂಗೀತವನ್ನು ಬಳಸಿಕೊಂಡರು. ಸಂಗೀತದೊಡನೆ ಹಾಡುತ್ತಾ ಜನರಲ್ಲಿ ಏಕತಾ ಮತ್ತು ಸಮಾನತಾ ತತ್ವವನ್ನು ಬೋಧಿಸಿದರು. ವೈಚಾರಿಕತೆಯ ಮಾನವೀಯ ಮೌಲ್ಯಗಳನ್ನು ಜನಸಾಮಾನ್ಯರಲ್ಲಿ ಮೂಡಿಸಲು ಪ್ರಯತ್ನಿಸಿದರು. ಸದಾ ಸಮುದಾಯದ ಒಳಿತನ್ನೇ ಬಯಸಿದರು. ಹೀಗೆ ತಮ್ಮ ನೆಲದ ಪರಿಸರದಲ್ಲಿ ವೈಯಕ್ತಿಕ ಹಾಗೂ ಸಾಮಾಜಿಕ ನೆಮ್ಮದಿ, ಶಾಂತಿಯನ್ನು ನೆಲೆಗೊಳ್ಳುವಂತೆ ಮಾಡುವಲ್ಲಿ ಶ್ರಮಿಸಿದ ಚಾಮರಾಜನಗರ ಜಿಲ್ಲೆಯ ತತ್ವಪದಕಾರರ ಅವಲೋಕನವನ್ನು ಮಾಡಲು ಈ ಪ್ರಬಂಧದಲ್ಲಿ ಪ್ರಯತ್ನಿಸಲಾಗಿದೆ.

ತತ್ವಪದ ಸಾಹಿತ್ಯದ ಆದ್ಯಪ್ರವರ್ತಕರೆಂದೇ ಹೆಸರಾಗಿರುವ 'ಶ್ರೀನಿಜಗುಣ ಶಿವಯೋಗಿ'ಗಳು ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ಸಮೀಪದ ಚಿಲಕವಾಡಿಯವರು. 15ನೇ ಶತಮಾನದಲ್ಲಿದ್ದ ನಿಜಗುಣ ಶಿವಯೋಗಿಗಳು 'ಶಂಭುಲಿಂಗನ ಬೆಟ್ಟ'ವನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡರು.

ಇವರಿಂದ ಗಹನವಾದ ಮತ್ತು ಉದಾತ್ತವಾದ ತತ್ವಗಳುಳ್ಳ ಜನಪ್ರಿಯವಾದ, ಸರಳವಾದ ಹೊಸ ಸಾಹಿತ್ಯ ಪ್ರಕಾರವೇ ಸೃಷ್ಟಿಯಾಯಿತು. ಲಿಖಿತರೂಪದಲ್ಲಿ 'ಕೈವಲ್ಯ ಪದ್ಧತಿ' ಎಂಬ ಹೆಸರಿನ ತತ್ವಪದಗಳ ಸಂಕಲನವನ್ನು ಲೋಕಾರ್ಪಣೆ ಮಾಡಿದರು. ಈ ಹಸ್ತಪ್ರತಿಗಳು ಇಂದಿಗೂ ಅನೇಕ ಮಠಮಾನ್ಯಗಳಲ್ಲಿ ರಕ್ಷಿಸಲ್ಪಟ್ಟಿವೆ. ಹೀಗೆ ನಿಜಗುಣರು ಕೈವಲ್ಯ ಸಾಹಿತ್ಯವೆಂಬ ಹೆಸರಿನಲ್ಲಿ ಒಂದು ಪರಂಪರೆಯನ್ನು ಸೃಷ್ಟಿಸಿ ಮುಂದಿನ ಅನುಭಾವಿಗಳಿಗೆ ದಾರಿದೀಪವಾದರು. ಆದ್ಯ ತತ್ವಪದಕಾರರು ಎಂಬ ಪ್ರಶಂಶೆಗೊಳಗಾದರು. ಕನ್ನಡ ಸಾಹಿತ್ಯದಲ್ಲಿ ತತ್ವಪದ ಸಾಹಿತ್ಯ ಪರಂಪರೆಗೆ ನಾಂದಿಹಾಡಿದರು.

ನಿಜಗುಣ ಶಿವಯೋಗಿಗಳು ತಮ್ಮ 174 ಪದಗಳನ್ನು 5 ಸ್ಥಲಗಳಲ್ಲಿ ಹೊಂದಿಸಿ 'ಕೈವಲ್ಯ ಪದ್ಧತಿ' ಎಂಬ ಕೃತಿಯನ್ನು ರಚಿಸಿದರು. ಇದರಲ್ಲಿ ಗಹನವೂ ನೈತಿಕವೂ ಆದ ವಿಷಯಗಳನ್ನು ಸರಳವಾಗಿ ನಿರೂಪಿಸಲಾಗಿದೆ.

***"ದುರಿತ ಕರ್ಮವನ್ನೊಲದಿರು***

***ಪುಣ್ಯವನೆ ಮಾಡು ಹರನಡಿಯ ಪಿಡಿ***

***ಶಾಂತರೊಡನಾಡು ಜೀವರೊಳು ಕರುಣವಿರಲಿ***

***ನೀತಿವಿದನಾಗು ಪೊರ್ದಿದರ ಪೊರೆ***

***ಕುದುವಡೆಯದೆ ಇರು ಕಾಮಾದಿಗಳನು ಜಯಿಸು"*** [1]

ಎನ್ನುವಲ್ಲಿ ಬದ್ಧನಾದ ಮನುಜನಿಗೆ ಉದ್ಧಾರದ ಹಾದಿಯನ್ನು ತೋರಿದ್ದಾರೆ. ಸದಾ ಕಾಯಕ ಮಾಡುತ್ತಾ, ಶಾಂತಿಪ್ರಿಯರ ಸಂಗಡದೊಂದಿಗೆ ಸಕಲ ಜೀವರಾಶಿಯನ್ನು ಕರುಣೆ–ಪ್ರೀತಿಯಿಂದ ಕಾಣು ಎನ್ನುತ್ತಾರೆ. ಆಸೆಗಳನ್ನು ಜಯಿಸಿ ನೀತಿವಂತನಾಗು ಎಂದು ಬೋಧಿಸಿದ್ದಾರೆ.

ಈ ತೆರನಾದ ಪದಗಳಿಂದಲೇ ನಿಜಗುಣರು ಸಕಲ ಜನ–ಮನವನ್ನು ಸೂರೆಗೊಂಡರು. ಇವರ ಪದಗಳ ಭಾವ–ಭಾಷೆ ಮತ್ತು ಸಂಗೀತ ಎಲ್ಲಾ ದೃಷ್ಟಿಯಿಂದಲೂ ವಿಶೇಷವಾದವು. ಇಂದಿಗೂ ಮಠ ಮಾನ್ಯಗಳಲ್ಲಿ, ಸಭೆ ಸಮಾರಂಭಗಳಲ್ಲಿ, ಭಜನಾ ಮಂದಿರಗಳಲ್ಲಿ ಈ ಪದಗಳದ್ದೇ ಮೇಲುಗೈ. ಇವುಗಳನ್ನು ಅನುಭಾವಿಗಳು, ಹಾಡುಗಾರರು ಪ್ರವಚನಗಳಲ್ಲಿ ವ್ಯಾಖ್ಯಾನಿಸುತ್ತಾರೆ. ಹಳ್ಳಿಗರು ಭಜನಾ ಮೇಳಗಳಲ್ಲಿ ಹಾಡಿ ಆನಂದಿಸುವ ಪರಂಪರೆ ಇಂದಿಗೂ ಚಾಮರಾಜನಗರ ಜಿಲ್ಲೆಯಾದ್ಯಂತ ಆಚರಣೆಯಲ್ಲಿದೆ.

ಜನಸಾಮಾನ್ಯರ ಆಡುಭಾಷೆಯಲ್ಲಿ ಮೂಡಿಬಂದಿರುವ ಆದ್ಯಾತ್ಮಪರವಾದ, ತತ್ವಪರವಾದ ನಿಜಗುಣರ ಹಾಡುಗಳು ಕೇಳುಗರನ್ನು ತಮ್ಮ ನಾದ ಗುಣದಿಂದ ಮೋಡಿಮಾಡಿ ಬಿಡುತ್ತವೆ. ಅವುಗಳ ಅಂತರಾಳದಲ್ಲಿ ಗೂಢವಾದ ಅರ್ಥವಿದೆ. ಆದರೆ ಮೇಲುನೋಟಕ್ಕೆ ಸಾಮಾನ್ಯ ಪದಗಳ ಹಾಗೆ ಕಾಣುತ್ತವೆ. ಅದರ ನಾದದ ಹಿಂದೆಯೇ ಸಾಗಿದರೆ ಪದದ ಭಾವ ತಟ್ಟನೆ ಹೊಳೆಯುತ್ತದೆ.

ನಿಜಗುಣರ ರಚನಾ ಶೈಲಿಯಲ್ಲಿ ಲಾಲಿತ್ಯ, ಮಾಧುರ್ಯ, ನಾದ ಸಂಪತ್ತಿದೆ ಎಂಬುದನ್ನು ಅವರ ತತ್ವಪದಗಳ ಸಂಕಲನವಾದ ಕೈವಲ್ಯ ಪದ್ಧತಿಯಿಂದ ಸ್ಪಷ್ಟವಾಗಿ ಗುರುತಿಸಬಹುದು. ಇವರು ತಮ್ಮ

ಕೃತಿಗಳನ್ನು 'ಪಲವು ಶ್ರುತಿಗಳಿಂದೆ... ಪಲವನು ಭವದಿಂದೆ.. ಪಲವು ದೃಷ್ಟಾಂತ ಯುಕ್ತಿಗಳಿಂದೆ' ಸ್ವಾದ್ಯ ಯೋಗ್ಯವಾಗುವಂತೆ ಮಾಡುತ್ತಾರೆ. ಅವರು ನೀಡುವ ಉಪಮೆಗಳಂತೂ ಅರ್ಥಪೂರ್ಣವಾಗಿರುತ್ತವೆ.

ಉದಾ:

***"ತರುಣಿಯ ಮೊಲೆಯೊಂದನುಣುತಲಣುಗನನ್ಯ***

***ಕರದೊಳುಳಿದ ಕುಚಾಗ್ರನ ನೋವುದಂತೆ ನರಜನ್ಮವಿಡಿದಿಹ ಭೋಗಾನುಭವದೊಳು***

***ಪರಲೋಕಗತಿಯ ಸಾಧನದೊಳೊಂದಿಹನು"*** [2]

***"ಕಣ್ಣೊಳಿರ್ದ ಕಸಮಂ ತೆಗೆದು ಕಾಣಲಾಗಿ ಬಾಧೆ ತೊಗಲಗುವಂತೆ"*** [3]

ಇಂತಹ ನೂರಾರು ಉಪಮೆಗಳು ಅರ್ಥವತ್ತಾಗಿ ನಿಜಗುಣರಿಂದ ಪ್ರಯೋಗಿಸಲ್ಪಟ್ಟಿವೆ. ಮನವೆಂಬ ಕೋಗಿಲೆಯನ್ನು ಉದ್ದೇಶಿಸಿ ಪರಿಪರಿಯಾಗಿ ಮಾಡಿದ ಹಿತೋಪದೇಶ ತುಂಬಾ ಸೊಗಸಾಗಿ ಮೂಡಿಬಂದಿದೆ.

***"ಕೋಗಿಲೆ ಚೆಲ್ವ ಕೋಗಿಲೆ ಮುದ್ದು***

***ಕೋಗಿಲೆ ಜಾಣ ಕೋಗಿಲೆ***

***ಹಿಂದೆ ತಪದೊಳೀಶನೊಂದಿರುತಿರಲೆಚ್ಚು***

***ಬೆಂದ ಕಾಮನ ಬಿಟ್ಟು ಕೋಗಿಲೆ***

***ಬಂದು ಬೇಗದಿ ಬಾಲೇಂದುಧರನ ಕೂಡಿ***

***ಕುಂದದೆ ನೀ ಬಾಳಿ ಕೋಗಿಲೆ"*** [4]

ಎಂದು ಮುಂದುವರಿಯುವ ಈ ಪದದಲ್ಲಿ ನಿಜಗುಣರ ಕಲ್ಪನಾ ವಿಲಾಸವಿದೆ. ಸೌಂದರ್ಯ ಪ್ರಜ್ಞೆ ಅರಳಿ ನಿಂತಿದೆ. ಕನ್ನಡ ಸಾಹಿತ್ಯ ಪ್ರಪಂಚದ ಕೋಗಿಲೆ ಕಾಮನ ಬಳಗಕ್ಕೂ, ಆಧ್ಯಾತ್ಮ ಸೀಮೆಯ ಕೋಗಿಲೆ ಶಿವನ ಬಳಗಕ್ಕೂ ಸೇರಿರುವುದು ಪ್ರಸಿದ್ಧವಾಗಿದೆ. ಕಾಮನ ಬಳಗವನ್ನು ಬಿಟ್ಟು ಶಿವನ ಬಳಗ ಸೇರುವಂತೆ ಕವಿ ಕೋಗಿಲೆಯನ್ನು ಒಲಿಸುವಾಗ ಭೋಗದ ನಶ್ವರತೆ ನಿರುಪಯುಕ್ತತೆಯನ್ನು ಯೋಗದ ಚಿರಂತರತೆ ಅಪೂರ್ವತೆಯನ್ನು ಅಕ್ಕಪಕ್ಕದಲ್ಲಿಟ್ಟು ವರ್ಣಿಸುತ್ತಾ ಹೋಗುತ್ತಾರೆ.

ಹೀಗೆ ಚಾಮರಾಜನಗರ ಜಿಲ್ಲೆಯ ತುಂಬಾ ಕಾಣಸಿಗುವ ನಿಜಗುಣರ ಎಲ್ಲಾ ಪದಗಳಲ್ಲಿ "ಭಕ್ತಿಭಾವದ ಮಿಡಿತ, ಪ್ರಾಸದ ಸೊಗಸು, ಪದವಿನ್ಯಾಸದ ಬೆಡಗು, ಛಂದಸ್ಸಿನ ವೈವಿಧ್ಯತೆ, ಅಲಂಕಾರಗಳ ಮಾಧುರ್ಯ, ಸೌಂದರ್ಯ ಪ್ರಜ್ಞೆ, ಸಂಗೀತದ ನಯಗಾರಿಕೆ ಇವು ರಾರಾಜಿಸುತ್ತವೆ"[5] ಎಂಬ ಮಾತು ಅರ್ಥವತ್ತಾಗಿದೆ.

'ಮುಪ್ಪಿನ ಷಡಕ್ಷರಿ' ಅವರು ಕನ್ನಡನಾಡು ಕಂಡ ಶ್ರೇಷ್ಠ ಅನುಭಾವಕವಿ, ತತ್ವಪದಕಾರರು. ಇವರು ನಿಜಗುಣ ಶಿವಯೋಗಿಗಳ ಸಮಕಾಲೀನರು. ಇವರ ಕಾಲ ದೇಶ ಕೃತಿಗಳು ಸಾಕಷ್ಟು ಚರ್ಚೆಗಳೊಳಗಾಗಿವೆ.

ಇವರು ಒಂದು ರೀತಿಯಲ್ಲಿ ಅಜ್ಞಾತ ಕವಿಗಳಾಗಿ ಕಂಡುಬರುತ್ತಾರೆ. ಇವರು ತಮ್ಮ ಪದಗಳಲ್ಲಿ ಎಲ್ಲಿಯೂ ಸ್ವಂತ ವಿಚಾರಗಳನ್ನು ಹೇಳಿಕೊಂಡಿಲ್ಲ. ತಮ್ಮ ಗುರುಗಳನ್ನು ಕುರಿತು ಒಂದು ಪದದಲ್ಲಿ ಹೀಗೆ ಹೇಳಿದ್ದಾರೆ.

***"ಎರಗಂಬಳ್ಳಿಯ ಸಿದ್ಧ***
***ವರಲಿಂಗ ನಾಮದಿಂ***
***ಹರನೇ ನೀನೆನಗೆ ದೀಕ್ಷೆಯ ಮಾಡಿದೆ***
***ವರ ಷಡಕ್ಷರಿಯ ದೇ***
***ವರ ನಾಮದಿಂದೆನಗೆ***
***ಅರುಹಿದಿರಿ ಶಿವಶಾಸ್ತ್ರದನುಭವವನು"*** [6]

ಎಂದು ಗುರುವನ್ನು ಸ್ಮರಿಸಿದ್ದಾರೆ. ಇದರ ಆಧಾರದ ಮೇಲೆ ಕವಿಚರಿತಕಾರರು ಇವರನ್ನು ಎರಗಂಬಳ್ಳಿಯ ಸಿದ್ಧಲಿಂಗರ ಶಿಷ್ಯ ಎಂದು ಊಹಿಸಿದ್ದಾರೆ. ಸಿದ್ಧಲಿಂಗರಿಂದ ದೀಕ್ಷೆಯನ್ನು ಹೊಂದಿ ನೂತನ ನಾಮಾಂಕಿತವನ್ನು ಪಡೆದುದರಿಂದ ಮುಪ್ಪಿನ ಷಡಕ್ಷರಿಗಳು ಆ ಮಠಕ್ಕೆ ಅಧಿಪತಿಗಳಾಗಿದ್ದರಬಹುದು ಅಲ್ಲಿನ ಸ್ಥಳೀಯರು ಅಭಿಪ್ರಾಯ ಪಡುತ್ತಾರೆ. ಎರಗಂಬಳ್ಳಿ ಗ್ರಾಮವು ಚಾಮರಾಜನಗರ ಜಿಲ್ಲೆ ಯಳಂದೂರು ತಾಲ್ಲೂಕಿನಲ್ಲಿದೆ. ಅಲ್ಲಿ ಷಡಕ್ಷರಿಯವರ ಗದ್ದುಗೆಯಿದ್ದು, ನಿಜಗುಣ ಶಿವಯೋಗಿಗಳು ವಾಸವಿದ್ದ ಚಿಲಕವಾಡಿಗೆ ಸನಿಹದಲ್ಲಿದೆ. ಎ(ಯ)ರಗಂಬಳ್ಳಿಯಲ್ಲಿ ಮುಪ್ಪಿನ ಷಡಕ್ಷರಿಯವರು ತಪೋನುಷ್ಠಾನಗೈದರೆಂದು ಹೇಳುವ "ಮುಪ್ಪಿನ ಷಡಕ್ಷರಿಗಳ ಗವಿ" ಎಂಬ ಜನಜನಿತವಾದ ಗವಿ ಇಂದಿಗೂ ಸ್ಥಳೀಯರಿಂದ ಪೂಜೆಗೊಳ್ಳುತ್ತಿದೆ.

"ಮುಪ್ಪಿನ ಷಡಕ್ಷರಿಗಳ ಕಾಲವನ್ನು ಕ್ರಿ.ಶ.1750 ಎಂದು"[7] ಊಹಿಸಿದ್ದಾರೆ. ಇವರು ಷಡಕ್ಷರಲಿಂಗ ಎಂಬ ಅಂಕಿತದಲ್ಲಿ ಹಲವಾರು ಪದಗಳನ್ನು ರಚಿಸಿದ್ದಾರೆ. ಅವುಗಳನ್ನು 'ಕೈವಲ್ಯಪದ'ಗಳೆಂದು ಕರೆಯಲಾಗಿದೆ. ಈ ಪದಗಳನ್ನು "ಮುಪ್ಪಿನ ಷಡಕ್ಷರಿಗಳ ಕೈವಲ್ಯ ಪದಗಳು"[8] ಎಂಬ ಹೆಸರಿನಿಂದ ಸಂಗ್ರಹಿಸಲಾಗಿದೆ. ಮುಪ್ಪಿನ ಷಡಕ್ಷರಿಗಳು ರಚಿಸಿದ ಕೃತಿ ಒಂದೇ ಆದರೂ ಅದು ಸತ್ವಪೂರ್ಣವಾಗಿದೆ. ಅವರ ದಿವ್ಯಾನುಭವದ ಅಮರಗೀತೆಗಳು ಜನಸಾಮಾನ್ಯರಿಗೂ ಅರ್ಥವಾಗುವಷ್ಟು ಸರಳ, ಸುಂದರವಾಗಿದೆ. ಆರೂಢ ಮಾರ್ಗವನ್ನು ಹಿಡಿದು ಮುನ್ನಡೆದ ಮುಪ್ಪಿನಾರ್ಯರ ಮೇಲೆ ವಚನಗಳ ಪ್ರಭಾವ ಅಧಿಕವಾಗಿ ಆಗಿದೆ. ಮುಪ್ಪಿನ ಷಡಕ್ಷರಿಯವರು ವಚನಕಾರರನ್ನು ನೆನೆದು "ಭಕ್ತಿ, ಜ್ಞಾನ, ವೈರಾಗ್ಯಗಳನ್ನು ಭಿಕ್ಷೆಬೇಡಿ ತಮ್ಮ ಮನದ ಜೋಳಿಗೆಯನ್ನು ತುಂಬಿಕೊಂಡಿದ್ದಾರೆ". ತಮ್ಮನ್ನು ಹೆಣ್ಣು ಮಗಳಿಗೆ ಹೋಲಿಸಿಕೊಂಡು ಶರಣರನ್ನು ತವರುಮನೆಯವರಂತೆ ಭಾವಿಸಿ ತಮ್ಮನ್ನು ಯಾವಾಗ ತವರಿಗೆ ಕರೆಯಲು ಬರುತ್ತಾರೋ ಕಾಣೆ ಎಂದು ಕಾತರದಿಂದ ಹಂಬಲಿಸುವ ಚಿತ್ರ ಹೃದಯಂಗಮವಾಗಿದೆ.

***"ಹೆಮ್ಮಗಳು ನಾ ನಿಮ್ಮ***
***ನೆಮ್ಮಿಕೊಂಡಿರುವನ್ಯೆ***
***ಗಮ್ಮನೇ ಎನ್ನುವುದ ಕರೆಯ ಬನ್ನಿ"*** [8]

ಶರೀರ ಧರ್ಮವಿಡಿದು ಅನ್ನಕ್ಕಾಗಿ ಅಲೆಯುವಾಗ

***"ಒಡೆದ ಗಡಿಗೆ ಹರಿದ ಜೋಳಿ***
***ಗೆಡದ ಕೈಯ್ಯ ಮುರಿದ ಕೋಲು***
***ಹಿಡಿದು ಊರನೆಲ್ಲ ತಿರಿದು ತಂದು ನೋಡಲು***
***ಒಡಲಿಗಾಗದಂತೆ ಮಾಡು***
***ಪೊಡವಿಯೊಳಗೆ ಸುಖವ ಮೆಚ್ಚಿ***
***ಒಡೆಯ ನಿಮ್ಮ ಮರೆದು ಭವಕೆ ಬೀಳಲಾರೆನು"***[9]

ಎಂದು ಬೇಡಿಕೊಂಡಿದ್ದಾರೆ.

ಮುಪ್ಪಿನಾರ್ಯರು ತಮ್ಮ ಪದದಲ್ಲಿ ಮನಸ್ಸು ಅಷ್ಟು ಸುಲಭವಾಗಿ ತಮ್ಮ ಹತೋಟಿಗೆ ಬರುವ ವಸ್ತುವಲ್ಲ ಎನ್ನುತ್ತಾರೆ. ಇದನ್ನು ನೋಡಿದಾಗ ಮನವನ್ನು ಗೆಲ್ಲಲು ಅವರು ನಡೆಸಿರುವ ಹೋರಾಟವೆಷ್ಟು ಎಂಬುದರ ಅರಿವಾಗುತ್ತದೆ.

***"ಹುಲಿಯ ಕರಡಿ ಕರಿಯ ಫಣಿಯ***
***ಬಹುಹಿನಿಂದಲಾಳ್ವರುಂಟು***
***ಚಲಿಸದಂತೆ ಮನವನಾಳ್ವರಾರ ಕಾಣೆನು"*** [10]

ಎಂದು ಮೊರೆಯಿಡುತ್ತಾ ತಮ್ಮ ಸಾಧನೆಯ ಫಲದಿಂದ ದೊರೆತ ಸುಜ್ಞಾನದ ಖಡ್ಗದಿಂದ ತಮ್ಮ ಹೀನ ಮನದ ಬಯಕೆಗಳನ್ನು ಮುಪ್ಪಿನ ಷಡಕ್ಷರಿ ಅವರು ಕಡಿದು ಹಾಕಿದರು.

ಹೀಗೆ ಭಕ್ತಿ, ಜ್ಞಾನ, ವೈರಾಗ್ಯಗಳು ಮುಪ್ಪುರಿಗೊಂಡು ಹೊರಹೊಮ್ಮಿರುವ ಅವರ ತತ್ವಪದಗಳು ಅನುಭಾವದ ಸಂಪತ್ತಿನಿಂದ ಕೂಡಿವೆ. ಸುಂದರ ಅಭಿವ್ಯಕ್ತಿಯಿಂದ, ಸಹಜ ಸ್ಫೂರ್ತಿಯಿಂದ ಹೃದಯಂಗಮವಾಗಿದೆ.

ಚಾಮರಾಜನಗರ ಜಿಲ್ಲೆಯ ವಿವಿಧ ಭಾಗಗಳಲ್ಲಿ ನಿಜಗುಣ ಶಿವಯೋಗಿ ಮತ್ತು ಮುಪ್ಪಿನ ಷಡಕ್ಷರಿಗಳ ನಂತರ ಅವರಿಂದ ಪ್ರಭಾವಿತರಾದ ಕೆಲವು ತತ್ವಪದಕಾರರು ಉದಯಿಸಿದರು. ಇವರಲ್ಲಿ ಅನೇಕರು ತಳಸಮುದಾಯದವರಾಗಿದ್ದು, ಅಕ್ಷರ ಲೋಕದಿಂದ ತುಸು ದೂರವೇ ಉಳಿದಿದ್ದರು. ಆದರೆ ಅವರು ಪದಗಳನ್ನು ಕಟ್ಟುತ್ತಾ, ಹಾಡುತ್ತಾ ಜನಾನುರಾಗಿಗಳಾಗಿ ಜಿಲ್ಲೆಯಾದ್ಯಂತ ತಿರುಗಿರುವ ಕುರುಹುಗಳು ಅಲ್ಲಲ್ಲಿ ಕಾಣಸಿಗುತ್ತವೆ. ಹಾಗೆಯೇ ಹಲವಾರು ತತ್ವಪದಕಾರರು ಮತ್ತು ಅವರ ತತ್ವಪದಗಳ ಮಾಹಿತಿಗಳು ಪೂರ್ಣಪ್ರಮಾಣದಲ್ಲಿ ದೊರಕದೇ ಇರುವುದು ವಿಷಾಧಕರ ವಿಚಾರವೇ ಸರಿ. ಆದರೂ ದೊರೆತ ಮಾಹಿತಿಯ ಆಧಾರದ ಮೇಲೆ ಕೆಲವು ತತ್ವಪದಕಾರರನ್ನು ಹೆಸರಿಸಬಹುದು. ಅವರುಗಳೆಂದರೆ ಕೊಳ್ಳೇಗಾಲ ಹತ್ತಿರದ ಮಧುವಿನಹಳ್ಳಿ ನಂಜುಂಡಶಾಸ್ತ್ರಿ, ದೇವಲಾಪುರದ ನಂಜುಂಡ, ಪಂಡಿತರ ಕರಿಬಸವಶಾಸ್ತ್ರಿ, ಹೊಂಡರ ಬಾಳಿನ ಅರಸು, ದೊಡ್ಡಿಂದುವಾಡಿ ಮಾಸ್ಟರ್ ಪುಟ್ಟಮಲ್ಲಪ್ಪ. ಯರಗಂಬಳ್ಳಿಯ ಗುರುಪೇರ್ನಂಗೆ

ಮೂತಿಹ ದಡದಹಳ್ಳಿ ಮಹದೇವಯ್ಯ, ದೊಡ್ಡಮೋಳೆ ರಂಗಯ್ಯ, ಅಂಬಳೆ ಕರುಗಪ್ಪಸ್ವಾಮಿ ಹಾಗೂ ಕುಣಗಳ್ಳಿ ಗುರುನಂಜಪ್ಪಸ್ವಾಮಿ ಕುಮಾರ ನಿಜಗುಣ ನಾಮಧೇಯದ ಪಿ.ಬಸವಣ್ಣ ಇನ್ನೂ ಹಲವರಿದ್ದಾರೆ. ಚಾಮರಾಜನಗರ ಜಿಲ್ಲೆಯಾದ್ಯಂತ ಕ್ಷೇತ್ರಕಾರ್ಯ ಕೈಗೊಂಡರೆ ಇನ್ನೂ ಅನೇಕ ತತ್ವಪದಕಾರರ ಬಗ್ಗೆ ಮಹತ್ವದ ಮಾಹಿತಿ ದೊರೆಯಬಹುದು.

ಚಾಮರಾಜನಗರ ಜಿಲ್ಲೆಯಾದ್ಯಂತ ಭಜನಾಮಂಡಳಿಯವರು ಮತ್ತು ತತ್ವಪದ ಗಾಯಕರು ಹಾಡುವ ಅದೆಷ್ಟೊ ತತ್ವಪದಗಳಿಂದ ತತ್ವಪದಕಾರರ ಮಾಹಿತಿಯನ್ನು ಕಲೆ ಹಾಕಬಹುದಾಗಿದೆ. ಹೆಸರು, ವಿಳಾಸ ಗೊತ್ತಿಲ್ಲದ ಅಥವಾ ಅಸ್ಪಷ್ಟವಾಗಿರುವ ಕೆಲವು ತತ್ವಪದಕಾರರನ್ನು ಅವರ ಅಂಕಿತಗಳಿಂದ ಗುರುತಿಸಬಹುದು. ನಿದರ್ಶನಕ್ಕೆ 'ಮಾರನಪುರ' ಎಂಬ ಅಂಕಿತದಲ್ಲಿ ಕೆಲವು ಪದಗಳು ಚಾಮರಾಜನಗರದೆಲ್ಲೆಡೆ ದೊರಕುತ್ತವೆ. ಮಧುವನಹಳ್ಳಿಯನ್ನು ಮಾರನಪುರ ಎಂದು ಕರೆದಿರುವ ಸಂಭವವಿದ್ದರೆ ಈ ಅಂಕಿತದ ತತ್ವಪದಗಳು ಮಧುವನ ಹಳ್ಳಿ ನಂಜುಂಡಶಾಸ್ತ್ರಿಗಳದ್ದು ಎಂದು ನಿರ್ಧರಿಸಬಹುದು.

ನಂಜುಂಡಶಾಸ್ತ್ರಿ ಎಂಬುವರು ಕೊಳ್ಳೇಗಾಲ ತಾಲ್ಲೂಕಿನ ಮಧುವಿನಹಳ್ಳಿಯವರು. ಬ್ರಾಹ್ಮಣ ಧರ್ಮಿಯರಾದ ಇವರು ತತ್ವಪದ ಸಂಸ್ಕೃತಿಗೆ ಮಾರುಹೋಗಿ, ದೇವನೂರು ಶ್ರೀ ಗುರು ಮಲ್ಲೇಶ್ವರರಿಂದ ಅನುಗ್ರಹೀತರಾದರು ಎಂಬುದು ಸ್ಥಳೀಯರಿಂದ ತಿಳಿದು ಬರುತ್ತದೆ. ನಂತರದ ದಿನಗಳಲ್ಲಿ ಜಾತೀಯತೆ, ಮೌಢ್ಯತೆಯನ್ನು ವಿರೋಧಿಸಿ ಹಾಗೂ ಸ್ತ್ರೀ ಸಮಾನತೆ ಕುರಿತಂತೆ ಹಲವಾರು ತತ್ವಪದಗಳನ್ನು ರಚಿಸಿ ಹಾಡಿದ್ದಾರೆ.

ಶಾಸ್ತ್ರಿಗಳು ತಮ್ಮ ಗುರುಗಳಾದ ಗುರುಮಲ್ಲೇಶ್ವರರನ್ನು ಮುದ್ದಾದ ಮಗುವಿಗೆ ಹೋಲಿಸಿಕೊಂಡು ಅನೇಕ ತೋಳು ಪದ, ಲಾಲಿಪದಗಳನ್ನು ರಚಿಸಿದ್ದಾರೆ. ಇಷ್ಟೆಲ್ಲಾ ಶ್ರೇಷ್ಠತಮವಾದ ಪದಗಳು ಇವರಿಂದ ರಚಿಸಲ್ಪಟ್ಟಿದ್ದರೂ ಕೂಡ ಸಂಗ್ರಹಿಸಿಟ್ಟಿಲ್ಲದ್ದರಿಂದ ನಮಗೆ ಬೆರಳೆಣಿಕೆಯಷ್ಟು ಮಾತ್ರ ಲಭ್ಯವಿದೆ. ಇವರ ಅಂಕಿತ 'ಮಧುಪುರೇಶ' ಎಂದಿದೆ.

***"ಓಂ ಹಂ.. ನಿಲ್ಲಿಸು ಕಾಯದ ಮಧ್ಯದಿ***
***ಸೋಹಂ ಸಿದ್ಧಿಯ ಪ್ರಣಮವಿದೆ***
***ಆಹಾ! ಆಹಾ! ಸಾಮಧ್ವನಿಯೊಳು***
***ಆ ಉಮಾಕ್ಷರುಗಳು ನುಡಿಯುತಿರೆ"*** [11]

ಹೀಗೆ ಶಿವ ಷಡಕ್ಷರದ ಮಂತ್ರವನ್ನು ಕುರಿತು ಹಾಡಿದ ಪದ ಅತ್ಯಂತ ಜನಪ್ರಿಯವಾಗಿದೆ.

ಕರಿಬಸವ, ಕೆರೆಬಸವ, ತುರುವೆಕೆರೆ ಬಸವ ಎಂಬ ಅಂಕಿತವಿರುವ ಹಾಡುಗಳು ಭಜನಾಮಂಡಳಿಗಳ ಹಾಡುಗಾರರು ಹಾಡುವಲ್ಲಿ ಕೇಳಿ ಬರುತ್ತವೆ. ಈ ಮೂರು ಹೆಸರು ಒಬ್ಬನದೇ ಇರಬೇಕೆ? ಅಥವಾ ನಿಜಗುಣರ ಶಿಷ್ಯ ನೀಲ ವೃಷಭನೆಂಬುವನೊಬ್ಬನಿದ್ದನೆಂದು ಹೇಳುವ ಮಾತಿನ ಆಧಾರದ ಮೇಲೆ ಈತನೆ ಕರಿಬಸವನೆಂಬ ಹೆಸರಿನಿಂದ ರಚಿಸಿರಬಹುದೋ? ತಿಳಿಯದು" [12] ಎನ್ನುವ ಅಭಿಪ್ರಾಯಗಳೂ ಇದೆ.

ಚಾಮರಾಜನಗರ ಜಿಲ್ಲೆಯ ಸುತ್ತ–ಮುತ್ತ ವರಗಂಗಾಧರೇಶ್ವರ ಎಂಬ ಅಂಕಿತದ ಹಾಡುಗಳು ಲಭ್ಯವಿದೆ. "ಬಹುಷಃ ಗುಂಡ್ಲುಪೇಟೆ ತಾಲ್ಲೂಕಿನ ಸೋಮನಹಳ್ಳಿ ಮಠದ ಮೂಲ ಗುರುಗಳಾದ ಗಂಗಾಧರೇಶ್ವರ ನೆನಪಿನಲ್ಲಿ ಈ ಹಾಡುಗಳನ್ನು ರಚಿಸಿರಬೇಕು"[13] ಎಂಬ ಮಾತಿಗೆ ಪೂರವಾದ ಅನೇಕ ಮಾಹಿತಿಗಳು ದೊರಕುತ್ತವೆ.

ಯಳಂದೂರಿನ ಗೌರಿಶಂಕರನ ಶಿಷ್ಯ ಪಶಾಲ್ಯ ಕೃಷ್ಣರಾಜ ಅರಸು ಎಂಬ ತತ್ವಪದಕಾರ ತಾನು ಅರಸು ವಂಶಕ್ಕೆ ಸೇರಿದವನಾಗಿದ್ದರೂ ವಚನಕಾರರ, ತತ್ವಪದಕಾರರ ಆದರ್ಶಗಳನ್ನು ಒಪ್ಪಿಕೊಂಡು ತನ್ನನ್ನು ಅದರಲ್ಲಿ ಅರ್ಪಿಸಿಕೊಂಡಿದ್ದನು. ಹಿಂದಿನವರಂತೆಯೇ ಹಲವಾರು ಪದಗಳನ್ನು ರಚಿಸಿ ಹಾಡಿರುವ ಇವರು 'ಭಕ್ತಿ ಮಾರ್ಗ ಸರೋವರ' ಮತ್ತು 'ಜ್ಞಾನ ಮಾರ್ಗಸರೋವರ''ಎಂಬ ಕೃತಿಗಳನ್ನು 1885ರಲ್ಲಿ ರಚಿಸಿದ್ದಾರೆ ಎನ್ನಲಾಗಿದೆ. ಇವರ ಹೆಚ್ಚಿನ ಹಾಡುಗಳಲ್ಲಿ ಅಕ್ಕಮಾದೇವಿಯ ಹಾಗೆಯೆ ಶರಣಸತಿ ಲಿಂಗಪತಿ ಭಾವ ವ್ಯಕ್ತವಾಗಿರುವುದು ಕಂಡುಬರುತ್ತದೆ.

***ಏನೇ ನಾಯಕಿ । ಎನ್ನ ಮೇಲಣ ಕರುಣ***

***ನಿನಗಿನಿತಿಲ್ಲವೆ?***

ಎಂದು ಸಾಗುವ ಹಾಡಿನ ಅಂತ್ಯ ಚರಣ ಹೀಗಿದೆ.

***"...ಬಾಲ ಚಂದ್ರನ । ಪುರದೊಳುದಿನ***

***ಪಾಲಿಸುವ । ಗೌರೀಶನಾ । ಬಾಲೆ ನೀ ಪೋಗಿ ಕರೆದು ತಾರೆ***

***ಛಲಮನದ । ಬೀಷ್ಟೆ ಕಾಂತನ"*** [14]

ಈ ಚರಣದಿಂದ ಕೃಷ್ಣರಾಜರು ಬಾಲೆಂದುಪುರದ (ಯಳಂದೂರು) ಗೌರಿಶಂಕರನ ಶಿಷ್ಯ ಎಂಬುದು ತಿಳಿದುಬರುತ್ತದೆ.

ಮಾಸ್ಟರ್ ಪುಟ್ಟಮಲ್ಲಪ್ಪನವರು ದೇವನೂರು ಮಠದ ಭಕ್ತರಾಗಿದ್ದ ಇವರು ಕೊಳ್ಳೇಗಾಲದ ದೊಡ್ಡಿಂದುವಾಡಿ ಗ್ರಾಮದವರು. ಹೆಸರಾಂತ ತತ್ವಪದಕಾರರಾಗಿರುವ ಇವರು ತಮ್ಮ ಗುರು 'ತೋಂಟಾದಾರ್ಯ'ರನ್ನು ಕುರಿತು ಹಲವು ಸ್ತೋತ್ರದ ಹಾಡುಗಳನ್ನು ಬರೆದಿದ್ದಾರೆ. ಅಲ್ಲದೇ ಹಲವಾರು ಮಂಗಳಾರತಿ ಪದ, ಅಕ್ಷರ ಮಾಲಿಕೆ ರೂಪದ ಹಾಡುಗಳನ್ನು ರಚಿಸಿದ್ದಾರೆಂಬುದು ತಿಳಿದು ಬರುತ್ತದೆ. ಹಾಗೆಯೇ ಇವರು ತಮ್ಮ ಮಠದ ಗುರುಗಳ ಬಗ್ಗೆ ಯಕ್ಷಗಾನವೊಂದನ್ನು ಬರೆದಿದ್ದಾರೆನ್ನಲಾಗಿದೆ. ಆದರೆ ಲಭ್ಯವಿಲ್ಲ ಹಾಗೂ ತಮ್ಮ ಗುರುವಿನ ಹೆಸರಿನ 'ತೋಂಟದಾರ್ಯ' ಎಂಬ ಕೃತಿಯನ್ನು ಬರೆದಿದ್ದಾರೆ. ಈ ಕಾಲದಲ್ಲೇ ಮಾಸ್ಟರ್ ಪುಟ್ಟಮಲ್ಲಪ್ಪ ಅವರು 'ಶ್ರೀ ಗುರುಮಲ್ಲುದೇಶಿಕಲಿಂಗ' ಎಂಬ ತ್ರೈಮಾಸಿಕವನ್ನು ಪ್ರಕಟಿಸಿದ್ದರು ಎಂಬುದು ದೊಡ್ಡಿಂದುವಾಡಿಯ ಗ್ರಾಮಸ್ಥರಿಂದ ತಿಳಿದುಬರುತ್ತದೆ.

ಹೊಂಡರಬಾಳಿನ ಅರಸು ಎಂಬುವವರು ಚಾಮರಾಜನಗರ ಜಿಲ್ಲೆಯ ತತ್ವಪದಕಾರರಲ್ಲಿ ಪ್ರಮುಖರು. ನಾಟಕಕಾರರು, ತತ್ವಪದಕಾರರೂ ಆಗಿದ್ದ ಇವರು ಅನೇಕ ಭಕ್ತಿ ಪ್ರಧಾನವಾದ, ಗುರುಪ್ರಧಾನವಾದ ಗೀತೆಗಳನ್ನು ರಚಿಸಿ ಹಾಡಿದ್ದಾರೆ. ಹಾಡಿಸಿದ್ದಾರೆ.

***"ಸಂಗನ ಬಸವೇಶ । ಜ್ಯೋತಿಯೇ***
***ಶ್ರೀ ಗುರು ಚಿನುಮಯರೂಪ ಶಿವಾ"*** [15]

ಎಂಬ ಇವರ ಹಾಡು ಜಿಲ್ಲೆಯಾದ್ಯಾಂತ ಜನಪ್ರಿಯವಾಗಿದೆ.

ಚಿಲಕವಾಡಿ ಶಂಭುಲಿಂಗನ ಬೆಟ್ಟದ ಕುಮಾರ ನಿಜಗುಣ ಎಂಬ ನಾಮಧೇಯದ ಶ್ರೀ ಪಿ.ಬಸವಣ್ಣನವರು ಸಾಹಿತಿಗಳೂ ಹೌದು ತತ್ವಪದಕಾರರೂ ಹೌದು. ಇವರು ಅನೇಕ ತತ್ವಪದಗಳನ್ನು ಬರೆದಿದ್ದು ಚಾಮರಾಜನಗರದ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಹಾಡು ಮತ್ತು ಭಜನೆಗಳ ಮೂಲಕ ಉಳಿದು ಬಂದಿದೆ. ಇವರ 'ನಿರೀಕ್ಷೆ', 'ಭಿಕ್ಷ' ಮತ್ತು 'ನಿಜಗುಣ ಸ್ತೋತ್ರ ಮಾಲೆ' ಈ ಮೂರು ಕೃತಿಗಳು ಸ್ವರವಚನ ಸಂಕಲನವಾಗಿದೆ.

ಹೀಗೆ ಚಾಮರಾಜನಗರ ಬೇರೆ ಬೇರೆ ಪ್ರದೇಶಗಳಲ್ಲಿ ಅನೇಕ ತತ್ವಪದಕಾರರು ಜೀವಿಸಿದ್ದರೆಂಬುದಕ್ಕೆ ಸಾಕ್ಷಿಯಾಗಿ ಅವರ ತತ್ವಪದಗಳು ದೊರಕುತ್ತವೆ. ಕೆಲವು ತತ್ವಪದಕಾರರು ಆಗಿ ಹೋಗಿದ್ದರೂ ಕೂಡ, ಅವರ ಬಗೆಗಿನ ಯಾವುದೇ ಸ್ಪಷ್ಟವಾದ ಮಾಹಿತಿಗಳು ಹಾಗೆಯೇ ಸಿಗದಿರುವುದು ವಿಷಾಧಕರ ಸಂಗತಿ. ಯಳಂದೂರು, ಕೊಳ್ಳೇಗಾಲ, ಚಾಮರಾಜನಗರ, ಮುಂತಾದ ಭಾಗಗಳಲ್ಲಿ 'ಗುರುಪೇರ್ಸಿಂಗ ಮೂರ್ತಿ' ಎಂಬ ಅಂಕಿತದೊಂದಿಗೆ ಹಲವಾರು ತತ್ವಗಳು ದೊರಕುತ್ತವೆ. ಯಳಂದೂರು ತಾಲ್ಲೂಕು ಅಂಬಳೆ ಗ್ರಾಮದಲ್ಲಿ ವಾಸವಾಗಿದ್ದ ಶ್ರೀಸಿದ್ದಯ್ಯ (ಕರುಗಪ್ಪ ಸ್ವಾಮಿಗಳು) ಅವರು ರಚಿಸಿದ್ದ ತತ್ವಪದಗಳು ಅಲ್ಲಿನ ತತ್ವಪದ ಗಾಯಕರಿಂದ ಇಂದಿಗೂ ಹಾಡಲ್ಪಡುತ್ತಿವೆ. ಹಾಗೆಯೇ ಕುಣಗಳ್ಳಿಯಲ್ಲಿ ವಾಸವಿದ್ದ ಗುರುನಂಜಪ್ಪ ಸ್ವಾಮಿಗಳು ರಚಿಸಿದ್ದ ಅನೇಕ ತತ್ವಪದಗಳು ಇಂದಿಗೂ ಚಾಮರಾಜನಗರದ ಸುತ್ತಮುತ್ತ ಹಾಡಲ್ಪಡುತ್ತವೆ. ಹಿರಿಯ ತತ್ವಪದಕಾರರ ಹಾಗೆ ಇಲ್ಲಿಯೂ ಜಾತೀಯತೆ ಮೌಢ್ಯವನ್ನು ಪ್ರಧಾನವಾಗಿ ಇವರ ಪದಗಳಲ್ಲಿ ವಿರೋಧಿಸಲಾಗಿದೆ. ಕೆಲವು ಪದಗಳು ಈ ನೆಲದ ತತ್ವಪದಕಾರರಿಂದಲೇ ರಚಿತವಾದವೋ ತಿಳಿಯದು. ಹಾಗೆಯೇ ಉತ್ತರ ಕರ್ನಾಟಕದ ತತ್ವಪದಕಾರರಾದ ಶಿಶುನಾಳ ಷರೀಫರಾದಿಯಾಗಿ ಅವರ ತತ್ವಪದಗಳು ಚಾಮರಾಜನಗರದ ನೆಲಕ್ಕೆ ಒಗ್ಗಿಕೊಂಡು ಅಲ್ಪ–ಸ್ವಲ್ಪ ಬದಲಾವಣೆಯೊಂದಿಗೆ ಪ್ರಚಲಿತದಲ್ಲಿವೆ. ರೂಪಾಂತರಗೊಂಡಿವೆ.

ಉತ್ತರಕರ್ನಾಟಕದಲ್ಲಿ ರಚನೆಯಾದ ತತ್ವಪದಗಳಷ್ಟು ಚಾಮರಾಜನಗರ ಜಿಲ್ಲೆಯಲ್ಲಿ ರಚನೆಯಾಗಿಲ್ಲ. ಅದಕ್ಕೆ ಪರಿಸರ ಮತ್ತು ಕಾಲವೂ ಕಾರಣವಿರಬಹುದು. ವಚನಕಾರರಲ್ಲಿ ಹೆಚ್ಚು ಜನ ಉತ್ತರ ಕರ್ನಾಟಕದಲ್ಲಿ ಜನಿಸಿದ್ದರಿಂದ ಇವರ ಪ್ರಭಾವ ಆ ನೆಲಕ್ಕೆ ಹೆಚ್ಚಾಗಿದೆ. ಇದು ತತ್ವಪದಗಳ ಸೃಷ್ಠಿಗೂ ಕಾರಣವಾಗಿರಬಹುದು. ಆದರೆ ಚಾಮರಾಜನಗರ ಜಿಲ್ಲೆಯಲ್ಲಿ ಕೆಲವೇ ತತ್ವಪದಕಾರರ ಮಾಹಿತಿ ದೊರೆತರೂ ಕನ್ನಡ ತತ್ವಪದಗಳನ್ನು ಮನೆ–ಮನಗಳಿಗೆ ತಲುಪಿಸುವ ಕಾಯಕದಲ್ಲಿ ನಿರತರಾದ ತತ್ವಪದಗಾಯಕರು ಅನೇಕರಿದ್ದಾರೆ. ಇವರು ಹಾಡುವ ಹಾಡುಗಳಲ್ಲಿ ನೀತಿ ಇದೆ, ವ್ಯಂಗ್ಯವಿದೆ, ಬೆಡಗಿದೆ, ಸ್ತುತಿಯಿದೆ, ಆತ್ಮನಿವೇದನೆಯಿದೆ, ವೈರಾಗ್ಯವಿದೆ, ಲಾಲಿತ್ಯವಿದೆ, ಮೊನಚಿದೆ, ನಾಟ್ಯವಿದೆ, ಲಯಬದ್ಧತೆಯಿದೆ, ಮೋಹಕತೆ, ಭಾವ, ಬಂಧುರತೆಗಳಿವೆ.

ಇಂತಹ ಹಾಡುಗಳು ತತ್ವಪದ ಹಾಡುಗಾರರಿಂದಲೇ ಜನರ ಮನಸ್ಸಿನ ಕದವನ್ನು ತಟ್ಟುತ್ತವೆ. ಹೃದಯ ತಲುಪುತ್ತವೆ. ಆ ಮೂಲಕ ಸಾರ್ಥಕಗೊಳ್ಳುತ್ತವೆ. ಈ ಗಾಯಕರು ಜಿಲ್ಲೆಯ ತುಂಬಾ ಕಾಣಸಿಗುತ್ತಾರೆ.

ಚಾಮರಾಜನಗರ ಜಿಲ್ಲೆಯ ಮತ್ತು ಇನ್ನಿತರ ಭಾಗಗಳಲ್ಲಿನ ತತ್ವಪದಕಾರರ ತತ್ವಪದಗಳು ಮೌಖಿಕವಾಗಿ ಪರಂಪರಾನುಗತವಾಗಿ ಉಳಿದು–ಬೆಳೆದು ಬರಲು ಇವರು ಕಾರಣರಾಗಿದ್ದಾರೆ. ತಮ್ಮದೇಯಾದ ಸಂಸ್ಕೃತಿಯೊಂದಿಗೆ, ಆಚಾರ–ವಿಚಾರಗಳೊಂದಿಗೆ ಬದುಕುತ್ತಿರುವ ಇವರಿಂದ ಸಾಹಿತ್ಯವಾಗಿ, ಸಂಗೀತಾತ್ಮಕವಾಗಿ ಸಾಂಸ್ಕೃತಿಕವಾಗಿ ಅಮೂಲ್ಯ ಸಂಪತ್ತಾದ ತತ್ವಪದಗಳನ್ನು ಸಂಗ್ರಹಿಸಿ ಸಂರಕ್ಷಿಸಬೇಕಾದುದು ನಮ್ಮೆಲ್ಲರ ಕರ್ತವ್ಯವಾಗಿದೆ. ಆ ಮೂಲಕ ಚಾಮರಾಜನಗರ ಜಿಲ್ಲೆಯ ತತ್ವಪದಕಾರರ ತತ್ವಪದಗಳು ಶಾಶ್ವತವಾಗಿ ಉಳಿದು ಬೆಳೆಯುವಂತೆ ಮಾಡಬೇಕಾಗಿದೆ.

**ಕೊನೆ ಟಿಪ್ಪಣಿಗಳು**

1. ಮಹದೇವಮೂರ್ತಿ, ಡಿ. ಎಂ. (1997). *ಸ್ವರವಚನ ವಿಚಾರ ಸಂಕಿರಣ ಸಂಪುಟ.* (ಸಂ. ಎಂ.ಎಂ. ಕಲಬುರಗಿ) ಜೆಎಸ್‌ಎಸ್. ಗ್ರಂಥಮಾಲೆ. ಪುಟ–179
2. ನಾಗಭೂಷಣ ಶಾಸ್ತ್ರಿಗಳು. (ಸಂ.). (1969). *ನಿಜಗುಣ ಶಿವಯೋಗಿಗಳ ಕೈವಲ್ಯ ಪದ್ಧತಿ.* ಪುಟ.35
3. ಅದೇ, ಪುಟ. 65
4. ಅದೇ, ಪುಟ. 102
5. ಅದೇ, ಪುಟ.36
6. ಜಗದ್ಗುರು ಶ್ರೀಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು. (1987). *ಮುಪ್ಪಿನ ಷಡಕ್ಷರಿಗಳ ಕೈವಲ್ಯ ಪದಗಳು ಪ್ರಸ್ತಾವನೆ.* ಪುಟ. 13
7. ನರಸಿಂಹಚಾರ್ಯ, ರಾ. (1929). ಕರ್ನಾಟಕ ಕವಿ ಚರಿತೆ ತೃತೀಯ ಸಂಪುಟ, ಪುಟ–81
8. ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು. (1987). ಪೂರ್ವೋಕ್ತ. ಪುಟ. 04
9. ಅದೇ, ಪುಟ. 61
10. ಅದೇ, ಪುಟ. 69
11. ಅದೇ, ಪುಟ. 101
12. ಮಹದೇವ ಮೂರ್ತಿ, ಡಿ.ಎಂ. (1997). *ಸ್ವರವಚನ ವಿಚಾರ ಸಂಕಿರಣ ಸಂಪುಟ.* (ಸಂ. ಎಂ.ಎಂ. ಕಲಬುರಗಿ) ಜೆಎಸ್‌ಎಸ್. ಗ್ರಂಥಮಾಲೆ. ಪುಟ. 185
13. ಅದೇ. ಪುಟ. 184
14. ಅದೇ. ಪುಟ. 185
15. ಅದೇ. ಪುಟ. 186